## ಕರ್ನಾಟಕ ಸರ್ಕಾರ

ಸಂ:ಆಇ 951 ವೆಚ್ಚ-12/2024

ಕರ್ನಾಟಕ ಸರ್ಕಾರದ ಸಚಿವಾಲಯ

ಆರ್ಥಿಕ ಇಲಾಖೆ

ಬೆಂಗಳೂರು, ದಿನಾಂಕ:16.01.2025

## ಸುತ್ತೋಲೆ

**ವಿಷಯ** : ರಾಜ್ಯದ ಎಲ್ಲಾ ಸಂಗ್ರಹಣಾ ಪ್ರಾಧಿಕಾರಗಳು ಕಡ್ಡಾಯವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ನಲ್ಲಿ Letter of Intent (LoI) ನೀಡುವಂತೆ ಹಾಗೂ L1 ಟೆಂಡರ್‌ದಾರರಿಗೆ ಕಾರ್ಯಾದೇಶ/ಸರಬರಾಜು ಆದೇಶ ನೀಡುವ ಕುರಿತು.

*****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು, 2000ರ ನಿಯಮ 25 ರಂತೆ ಸರಕು ಮತ್ತು ಸೇವೆಗಳ ಸಂಗ್ರಹಣೆಗಾಗಿ ಆಹ್ವಾನಿಸಲಾಗಿರುವ ಟೆಂಡರ್‌ಗಳಲ್ಲಿ ಮೌಲ್ಯಮಾಪನ ಮಾಡಿದ ಅತೀ ಕಡಿಮೆ ದರವನ್ನು (L1) ಮಾತ್ರ ಅಂಗೀಕರಿಸಬೇಕಾಗುತ್ತದೆ. ಇದೇ ಅವಕಾಶವನ್ನು ಸರ್ಕಾರದ ಸುತ್ತೋಲೆ ಸಂ:ಆಇ 213 ವೆಚ್ಚ-12/2022, ದಿನಾಂಕ:11.05.2022 ರಲ್ಲಿ ಪುನರುಚ್ಚರಿಸಿ ನಿರ್ದಿಷ್ಟವಾಗಿ L1 ಟೆಂಡರುದಾರರಿಗೆ ಮಾತ್ರ ಸಂಗ್ರಹಣಾ ಆದೇಶ ನೀಡುವಂತೆ ತಿಳಿಸಲಾಗಿರುತ್ತದೆ.

ಆದಾಗ್ಯೂ ಕೆಲವು ಸಂಗ್ರಹಣಾ ಪ್ರಾಧಿಕಾರಗಳು/ಅಂಗೀಕಾರ ಪ್ರಾಧಿಕಾರಗಳು ಮೇಲಿನ ನಿರ್ದೇಶನಗಳಿಗೆ ವ್ಯತಿರಿಕ್ತವಾಗಿ ಕ್ರಮವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಕೆಲವು ಪ್ರಮುಖ ಪ್ರಕರಣಗಳು ಈ ಕೆಳಗಿನಂತ್ತಿವೆ;

- ➢ L1 ಟೆಂಡರುದಾರರನ್ನು ಹೊರತುಪಡಿಸಿ ಇತರೆ ಟೆಂಡರುದಾರರ ಟೆಂಡರುಗಳನ್ನು ಅಂಗೀಕಾರ ಮಾಡುತ್ತಿರುವುದು;
- ➢ ಸಂಗ್ರಹಿಸಬೇಕಾದ ಸರಕು/ಸೇವೆಯನ್ನು ವಿಭಜಿಸಿ ಒಬ್ಬರಿಗಿಂತ ಹೆಚ್ಚಿನ ಗುತ್ತಿಗೆದಾರರಿಗೆ ಕಾರ್ಯಾದೇಶ/ಸರಬರಾಜು ಆದೇಶ ನೀಡುತ್ತಿರುವುದು;
- ➢ ಟೆಂಡರುಗಳನ್ನು ಅನಿರ್ದಿಷ್ಟ ಅವಧಿಗೆ ಕರೆದು ಕರಾರು ಅವಧಿಯನ್ನು ನಮೂದಿಸದೇ ಒಪ್ಪಂದ ಮಾಡಿಕೊಳ್ಳುತ್ತಿರುವುದು ಹಾಗೂ ಮುಂದುವರೆಸುತ್ತಿರುವುದು;
- ➢ LoI ಅನ್ನು Karnataka Public Procurement Portal (KPPP) ಮೂಲಕ ಹೊರಡಿಸದೇ ತಂತ್ರಾಂಶದ ಹೊರಗೆ ಪತ್ರ ಮುಖೇನ ಹೊರಡಿಸುತ್ತಿರುವುದು;

...2

- ಸರಬರಾಜುದಾರರ ಎಂಪ್ಯಾನಲ್ಡ್ ಪಟ್ಟಿಯನ್ನು ತಯಾರಿಸಿ ಅದರಲ್ಲಿನ ಒಂದಕ್ಕಿಂತ ಹೆಚ್ಚಿನ ಸರಬರಾಜುದಾರರಿಗೆ ಸರಬರಾಜು ಆದೇಶ ನೀಡುತ್ತಿರುವುದು ಮುಂತಾದ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುತ್ತವೆ.

ಮೇಲಿನಂತೆ ಸಂಗ್ರಹಣಾ ಪ್ರಾಧಿಕಾರಗಳು ಕೈಗೊಳ್ಳುತ್ತಿರುವ ಕ್ರಮಗಳು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ ಮತ್ತು ಅದರಡಿ ರಚಿಸಲಾದ ನಿಯಮಗಳ ಆಶಯಕ್ಕೆ ವ್ಯತಿರಿಕ್ತವಾಗಿರುತ್ತವೆ. ಅಲ್ಲದೆ, ಸರ್ಕಾರದಿಂದ ಕಾಲಕಾಲಕ್ಕೆ ಹೊರಡಿಸಲಾದ ಆದೇಶಗಳು, ಸುತ್ತೋಲೆಗಳು ಮತ್ತು ಮಾರ್ಗಸೂಚಿಗಳಿಗೆ ವಿರುದ್ಧವಾಗಿರುತ್ತವೆ. ಆದ್ದರಿಂದ, ಎಲ್ಲಾ ಸಂಗ್ರಹಣಾ ಪ್ರಾಧಿಕಾರಗಳು ತಮ್ಮ ಅಧೀನದಲ್ಲಿನ ಟೆಂಡರ್ ಮತ್ತು ಗುತ್ತಿಗೆದಾರರೊಂದಿಗಿನ ಒಪ್ಪಂದಗಳನ್ನು ಕೂಡಲೇ ಮರುಪರಿಶೀಲಿಸುವುದು ಮತ್ತು ಒಂದು ವೇಳೆ ಮೇಲೆ ನಮೂದಿಸಿದ ಪ್ರಕರಣಗಳು ಕಂಡುಬಂದಲ್ಲಿ ಕೂಡಲೇ ಸಂಬಂಧಪಟ್ಟ ಟೆಂಡರ್/ಕರಾರನ್ನು ರದ್ದುಪಡಿಸಿ ಹೊಸದಾಗಿ ಟೆಂಡರ್ ಆಹ್ವಾನಿಸುವ ಬಗ್ಗೆ ತಕ್ಷಣದಿಂದಲೇ ಕ್ರಮವಹಿಸುವಂತೆ ತಿಳಿಸಿದೆ.

ಮೇಲಿನ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದನ್ನು ಎಲ್ಲಾ ಸಂಗ್ರಹಣಾ ಪ್ರಾಧಿಕಾರಗಳು ಖಚಿತಪಡಿಸಿಕೊಳ್ಳತಕ್ಕದ್ದು. ಸದರಿ ನಿರ್ದೇಶನದ ಉಲ್ಲಂಘನೆಯು ಕೆ.ಟಿ.ಪಿ.ಪಿ ಕಾಯಿದೆ ಕಲಂ 23 ರನ್ವಯ, ದಂಡನಾರ್ಹವಾಗಿರುತ್ತದೆ ಎಂಬುದಾಗಿ ತಿಳಿಯಪಡಿಸಿದೆ.

(ಕಾಂತಮ್ಮ ಎನ್.ಎಂ)

ಸರ್ಕಾರದ ಅಧೀನ ಕಾರ್ಯದರ್ಶಿ

ಆರ್ಥಿಕ ಇಲಾಖೆ (ಸಂಗ್ರಹಣಾ ಕೋಶ)

16/1

ಸರ್ಕಾರದ ಎಲ್ಲಾ ಸಂಗ್ರಹಣಾ ಪ್ರಾಧಿಕಾರಗಳು.